ಅ) ಶಿಗ್ಗಾಂವ ತಾಲ್ಲೂಕು ಬಂಕಾಪುರ ಕೋಟೆ ಆವರಣದಲ್ಲಿ ನವಿಲು ಧಾಮ ನಿರ್ಮಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಕಲಂ. 36 (ಎ) ಅಡಿಯಲ್ಲಿ ಬಂಕಾಪುರ ಪಟ್ಟಣದ 139.10 ಎಕರೆ ಕೋಟೆ ಪ್ರದೇಶವನ್ನು ಸಂರಕ್ಷಿತ ಮೀಸಲು ಪ್ರದೇಶ ಎಂದು ಘೋಷಿಸಲು ಪ್ರಸ್ತಾವನೆ ಸಲ್ಲಿಸಿದ್ದು, ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಇ) ಈವರೆಗೆ ಕೇವಲ ನಾಮ ಫಲಕ ಮತ್ತು ಕುಡಿಯುವ ನೀರಿಗೆ ರೂ. 55 ಸಾವಿರ ಅನುದಾನ ಮಾತ್ರ ಬಿಡುಗಡೆಗೊಳಿಸಿ ಇನ್ನಿತರೇ ಯಾವುದೇ ಅಭಿವೃದ್ಧಿ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಆದಷ್ಟು ತೀವ್ರಗತಿಯಲ್ಲಿ ಪೂರ್ಣ ಪ್ರಮಾಣದ ನವಿಲು ಧಾಮ ನಿರ್ಮಿಸಲು ಸರ್ಕಾರ ಅನುದಾನ ಬಿಡುಗಡೆ ಗೊಳಿಸಲು ಕ್ರಮ ಕೈಗೊಳ್ಳವುದು ಯಾವಾಗ?

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು

ಆ) ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 237 ಎಫ್‌ಡಿಬ್ಲ್ಯೂಎಲ್ 2005 ದಿನಾಂಕ: 09–06–2006ರಲ್ಲಿ ಈ ಪ್ರದೇಶವನ್ನು ಬಂಕಾಪುರ ನವಿಲು ಸಂರಕ್ಷಣಾ ಮೀಸಲು ಎಂದು ಘೋಷಿಸಲಾಗಿದೆ.

ಇ) ಬಂಕಾಪುರ ನವಿಲು ಸಂರಕ್ಷಣಾ ಪ್ರದೇಶದ ನಿರ್ವಹಣೆ/ ಅಭಿವೃದ್ಧಿ ಇತ್ಯಾದಿ ಕಾಮಗಾರಿಗಳಿಗಾಗಿ ರೂ. 18 ಲಕ್ಷಗಳ ಕ್ರಿಯಾ ಯೋಜನೆಯನ್ನು ತಯಾರಿಸಿ, ಕೇಂದ್ರ ಪುರಸ್ಕೃತ ರಾಷ್ಟ್ರೀಯ ಉದ್ಯಾನವನ ಮತ್ತು ಅಭಯಾರಣ್ಯ ಅಭಿವೃದ್ಧಿ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರವನ್ನು ದಿನಾಂಕ: 08–01–2007ರಲ್ಲಿ ಕೋರಲಾಗಿರುತ್ತದೆ. ಅನುದಾನ ನಿರೀಕ್ಷಿಸಿದೆ.

ಈ) ಅನುದಾನ ನಿರೀಕ್ಷಿಸಲಾಗಿದೆ.

851(1113) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿಗ್ಗಾಂವ್–ಸವಣೂರ ತಾಲ್ಲೂಕುಗಳಲ್ಲಿ ಸುವರ್ಣ ಕಾಯಕ ಯೋಜನೆ ಅಡಿಯಲ್ಲಿ ನಿರುದ್ಯೋಗಿ ಯುವ ಜನರಿಗೆ ಅನುಕೂಲ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಶಿಗ್ಗಾಂವ್–ಸವಣೂರ ತಾಲ್ಲೂಕುಗಳಲ್ಲಿ ಸುವರ್ಣ ಕಾಯಕ ಯೋಜನೆ ಅಡಿಯಲ್ಲಿ ನಿರುದ್ಯೋಗಿ ಯುವ ಜನರಿಗೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶಿವಾನಂದ್ ಎಸ್. ನ್ಯಾಯ್ಕ (ಮಾನ್ಯ ಕೈಗಾರಿಕಾ ಸಚಿವರು)

ಅ) ಇಲ್ಲ

ಆ) ಆದರೆ ಈ ತಾಲ್ಲೂಕುಗಳಲ್ಲಿ, ಕೈಗಾರಿಕಾ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಕಡಿಮೆ ಇರುವುದರಿಂದ, ಈ ಯೋಜನೆಯಡಿ, ತಾಲ್ಲೂಕಿನಲ್ಲಿರುವ ವಿದ್ಯಾವಂತ ನಿರುದ್ಯೋಗಿಗಳು ಹೊರ ಜಿಲ್ಲೆಗಳ ಕೈಗಾರಿಕೆಗಳಲ್ಲಿ ತರಬೇತಿಗೆ ತಯಾರಿದ್ದಲ್ಲಿ ಅವಕಾಶ ಕಲ್ಪಿಸಲಾಗುವುದು.

853(507) ಶ್ರೀ ವಿ. ನೋಮಣ್ಣ (ಬಿನ್ನಿಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2006–07ನೇ ಸಾಲಿನಲ್ಲಿ ಸರ್ಕಾರಿ ಸ್ವಾಮ್ಯದ ಯಾವ ಯಾವ ಕೈಗಾರಿಕೆಗಳು ಹಾಗೂ ಇಲಾಖೆಯ ವ್ಯಾಪ್ತಿಯಲ್ಲಿರುವ ನಿಗಮ ಮಂಡಳಿಗಳು ನಷ್ಟವನ್ನು ಅನುಭವಿಸಿವೆ;

ಆ) ಈ ಕೈಗಾರಿಕೆಗಳ ನಿಗಮಗಳ/ಮಂಡಳಿಗಳ ಒಟ್ಟು ನಷ್ಟದ ಪ್ರಮಾಣವೆಷ್ಟು;

ಇ) ಈವರೆಗೆ ಯಾವ ಯಾವ ಕೈಗಾರಿಕೆಗಳನ್ನು ನಷ್ಟದ ಕಾರಣದಿಂದ ಮುಚ್ಚಲಾಗಿದೆ;

ಈ) ಯಾವ ಯಾವ ಕೈಗಾರಿಕೆಗಳು ಲಾಭದಲ್ಲಿವೆ ಹಾಗೂ ಲಾಭದ ಪ್ರಮಾಣವೆಷ್ಟು;

ಉ) ಮುಚ್ಚಿರುವ ಕೈಗಾರಿಕೆಗಳಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ನಿರ್ಧರಿಸಿದೆ; ಇದಕ್ಕೆ ಭರಿಸುವ ವೆಚ್ಚವೆಷ್ಟು;

ಊ) 2007–08ನೇ ಸಾಲಿನಲ್ಲಿ ಹೊಸದಾಗಿ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆ ಹಾಗೂ ಈ ರೀತಿ ಪ್ರಾರಂಭಿಸಲು ಸರ್ಕಾರದ ಉದ್ದೇಶವೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 2006–07ನೇ ಸಾಲಿನ ಲೆಕ್ಕಪತ್ರಗಳ ಆಡಿಟ್ ನಡೆಯುತ್ತಿರುವುದರಿಂದ, ಈ ಮಾಹಿತಿಯನ್ನು ಈಗಲೇ ನೀಡಲು ಸಾಧ್ಯವಾಗುವುದಿಲ್ಲ.

ಆ)

	(ರೂ. ಲಕ್ಷಗಳಲ್ಲಿ)
ಕವಿಕಾ ನಿ;	–2072.47
ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ & ಅಭಿವೃದ್ಧಿ ನಿಗಮ ನಿಯಮಿತ:	–574.64

ಮೈಸೂರು ಕಾಗದ ಕಾರ್ಖಾನೆ